# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ**: ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿಯನ್ನು ಕಲ್ಪಿಸಿರುವ ಪರಿಣಾಮವಾಗಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಪರಿಷ್ಕೃತ ಮೀಸಲಾತಿ ರೋಸ್ಟರನ್ನು ನಿಗದಿಪಡಿಸುವ ಬಗ್ಗೆ.

**ಓದಲಾಗಿದೆ**: (1) ದಿನಾಂಕ: 28.12.2022 ರ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 1 ಸೆಹಿಮ 2022.

(2) ದಿನಾಂಕ 25.08.2025 ರ ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024.

**ಪ್ರಸ್ತಾವನೆ** :

1. ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನಿಗದಿಪಡಿಸಲಾದ ಹೆಚ್ಚಿನ ಮೀಸಲಾತಿ ಪ್ರಮಾಣಕ್ಕೆ ಅನುಗುಣವಾಗಿ ನೇರ ನೇಮಕಾತಿ ಮುಖಾಂತರ ಭರ್ತಿ ಮಾಡುವ ರಿಕ್ತ ಸ್ಥಾನಗಳಿಗೆ ಸಂಬಂಧಿಸಿದಂತೆ ಮೇಲೆ (1) ರಲ್ಲಿ ಓದಲಾದ ದಿನಾಂಕ 28.12.2022 ರ ಸರ್ಕಾರದ ಆದೇಶದಲ್ಲಿ 100 ಬಿಂದುಗಳ ಪರಿಷ್ಕೃತ ರೋಸ್ಟರನ್ನು ನಿಗದಿಪಡಿಸಿ ಆದೇಶಿಸಲಾಗಿರುತ್ತದೆ.

2. ಪರಿಶಿಷ್ಟ ಜಾತಿಗಳಲ್ಲಿರುವ 101 ಜಾತಿಗಳನ್ನು ಪ್ರವರ್ಗ-ಎ, ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಗಳೆಂದು 3 ಪ್ರವರ್ಗಗಳಾಗಿ ವರ್ಗೀಕರಿಸಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಶೇಕಡ 17 ಮೀಸಲಾತಿಯನ್ನು, ಪ್ರವರ್ಗ-ಎ ರಲ್ಲಿನ ಸಮುದಾಯಗಳಿಗೆ ಶೇಕಡ 6, ಪ್ರವರ್ಗ-ಬಿ ರಲ್ಲಿನ ಸಮುದಾಯಗಳಿಗೆ ಶೇಕಡ 6 ಮತ್ತು ಪ್ರವರ್ಗ-ಸಿ ರಲ್ಲಿನ ಸಮುದಾಯಗಳಿಗೆ ಶೇಕಡ 5 ರಷ್ಟು ಮೀಸಲಾತಿಯನ್ನು ಮೇಲೆ (2) ರಲ್ಲಿ ಓದಲಾದ ದಿನಾಂಕ 25.08.2025 ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿ ಆದೇಶಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಮೇಲೆ (1) ರಲ್ಲಿ ಓದಲಾದ ದಿನಾಂಕ 28.12.2022 ರ ಸರ್ಕಾರದ ಆದೇಶದ ಅನುಬಂಧದಲ್ಲಿ ನಿಗದಿಪಡಿಸಿದ 100 ಬಿಂದುಗಳ ಮೀಸಲಾತಿ ರೋಸ್ಟರಿನಲ್ಲಿ ಪರಿಶಿಷ್ಟ ಜಾತಿಗಳಿಗೆ ಗುರುತಿಸಲಾಗಿರುವ 17 ಬಿಂದುಗಳನ್ನು

Scanned with OKEN Scanner

ಪರಿಶಿಷ್ಟ ಜಾತಿಗಳಲ್ಲಿ ವರ್ಗೀಕರಿಸಿರುವ ಪ್ರವರ್ಗ-ಎ, ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಎಂದು ಪುನರ್ ವರ್ಗೀಕರಿಸುವ ಸಂದರ್ಭ ಒದಗಿ ಬಂದಿರುತ್ತದೆ ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೇಹಿಮ 2025,**

**ಬೆಂಗಳೂರು, ದಿನಾಂಕ:03.09.2025**

3. ಪರಿಶಿಷ್ಟ ಜಾತಿಗಳಲ್ಲಿರುವ 101 ಜಾತಿಗಳನ್ನು ಪ್ರವರ್ಗ-ಎ, ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಗಳೆಂದು 3 ಪ್ರವರ್ಗಗಳಾಗಿ ವರ್ಗೀಕರಿಸಿ, ಶಿಕ್ಷಣ ಮತ್ತು ಉದ್ಯೋಗದಲ್ಲಿ ಪರಿಶಿಷ್ಟ ಜಾತಿಗಳಿಗೆ ಪ್ರಸ್ತುತ ಜಾರಿಯಲ್ಲಿರುವ ಶೇಕಡ 17 ರಷ್ಟು ಮೀಸಲಾತಿಯನ್ನು, ಪ್ರವರ್ಗ-ಎ ರಲ್ಲಿನ ಸಮುದಾಯಗಳಿಗೆ ಶೇಕಡ 6, ಪ್ರವರ್ಗ-ಬಿ ರಲ್ಲಿನ ಸಮುದಾಯಗಳಿಗೆ ಶೇಕಡ 6 ಮತ್ತು ಪ್ರವರ್ಗ-ಸಿ ರಲ್ಲಿನ ಸಮುದಾಯಗಳಿಗೆ ಶೇಕಡ 5 ರಷ್ಟು ಮೀಸಲಾತಿಯನ್ನು ಮೇಲೆ (2) ರಲ್ಲಿ ಓದಲಾದ ದಿನಾಂಕ 25.08.2025 ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿ ಆದೇಶಿಸಿರುವ ಹಿನ್ನೆಲೆಯಲ್ಲಿ ಮೇಲೆ (1) ರಲ್ಲಿ ಓದಲಾದ ದಿನಾಂಕ 28.12.2022 ರ ಸರ್ಕಾರದ ಆದೇಶದ ಅನುಬಂಧದಲ್ಲಿ ಪರಿಶಿಷ್ಟ ಜಾತಿಗಳಿಗೆ ಗುರುತಿಸಲಾಗಿರುವ 17 ಬಿಂದುಗಳನ್ನು ಮಾತ್ರ ಈ ಆದೇಶದ ಅನುಬಂಧದಲ್ಲಿರುವಂತೆ ಪುನರ್ ವರ್ಗೀಕರಿಸಿ ಆದೇಶಿಸಲಾಗಿದೆ.

4. ಉಳಿದಂತೆ, ದಿನಾಂಕ 28.12.2022 ರ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ.

5. ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ. ಯಾವುದೇ ವೃಂದದ ಹುದ್ದೆಗಳಿಗೆ ನೇರ ನೇಮಕಾತಿಯ ಪ್ರಕ್ರಿಯೆಯನ್ನು ದಿನಾಂಕ 28.12.2022 ರ ಸದರಿ ಆದೇಶದ ಅನುಬಂಧದಲ್ಲಿ ನಿಗದಿಪಡಿಸಿರುವ 100 ಬಿಂದುಗಳ ರೋಸ್ಟರನ್ನು ಅನುಸರಿಸಿ, ರಿಕ್ತಸ್ಥಾನಗಳನ್ನು ವರ್ಗೀಕರಣ ಮಾಡಿ ಈಗಾಗಲೇ ಪ್ರಾರಂಭಿಸಿದ್ದಲ್ಲಿ ರೋಸ್ಟರಿನ ಯಾವ ಬಿಂದುವಿನವರೆಗೆ ಜಾರಿಗೊಳಿಸಲಾಗಿದೆಯೋ, ಆ ನಂತರದ ರೋಸ್ಟರ್

Scanned with OKEN Scanner

ಬಿಂದುವಿನಿಂದ ಪ್ರಾರಂಭಿಸಿ, ಈ ಆದೇಶದ ಅನುಬಂಧದಲ್ಲಿ ನಿಗದಿಪಡಿಸಿರುವ ರೋಸ್ಟರ್ ಬಿಂದುಗಳನ್ನು ಅನುಸರಿಸಿ ಮುಂದಿನ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

3/9/2025

(ಚಂದ್ರಶೇಖರ್)
ಸರ್ಕಾರದ ವಿಶೇಷ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು).

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ ಇದರ 50 ಪ್ರತಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-ಎ), ಕೊಠಡಿ ಸಂಖ್ಯೆ-31, ವಿಧಾನಸೌಧ, ನೆಲಮಹಡಿ ಇಲ್ಲಿಗೆ ಕಳುಹಿಸುವಂತೆ ಕೋರಲಾಗಿದೆ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು, (ಜಿ&ಎಸ್‌ಎಸ್‌ಎ), (ಇ&ಆರ್‌ಎಸ್‌ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ ಪಾರ್ಕ್ ಹೌಸ್ ರಸ್ತೆ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು.
4. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು
6. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರು/ ಪ್ರಧಾನ ಕಾರ್ಯರ್ಶಿಗಳು/ಕಾರ್ಯದರ್ಶಿಗಳು
7. ಮಾನ್ಯ ರಾಜ್ಯಪಾಲರ ವಿಶೇಷ ಕಾರ್ಯದರ್ಶಿಯವರು.
8. *ನಿವಾಸಿ ಆಯುಕ್ತರು, ಕರ್ನಾಟಕ ಭವನ, ಕೌಟಿಲ್ಯ ಮಾರ್ಗ, ನವದೆಹಲಿ.
9. *ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ಪರಿಷತ್ತು, ಬೆಂಗಳೂರು.
10. *ಮಹಾನಿಬಂಧಕರು, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
11. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. *ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
13. *ನಿಬಂಧಕರು, ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿ, 6 ಮತ್ತು 7ನೇ ಮಹಡಿ, ಕಂದಾಯ ಭವನ, ಕೆ.ಜಿ. ರಸ್ತೆ, ಬೆಂಗಳೂರು-560009

Scanned with OKEN Scanner

14. *ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬಹುಮಹಡಿ ಕಟ್ಟಡ, ಬೆಂಗಳೂರು.
15. ಎಲ್ಲಾ ಇಲಾಖಾ ಮುಖ್ಯಸ್ಥರು/ಎಲ್ಲಾ ಪ್ರಾದೇಶಿಕ ಆಯುಕ್ತರು.
16. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್/ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು.
17. ಸರ್ಕಾರದ ಅಪರ ಕಾರ್ಯದರ್ಶಿ (ಸಚಿವ ಸಂಪುಟ)
18. ಸರ್ಕಾರದ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು.
19. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
20. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

(*ಮುಖ ಪತ್ರದೊಂದಿಗೆ)

Scanned with OKEN Scanner

# ಅನುಬಂಧ

## ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 02 ಸೆಹಿಮ 2025 ದಿನಾಂಕ:03.09.2025

| | | | | | | | |
|---|---|---|---|---|---|---|---|
| 01 | **ಪ.ಜಾ. ಪ್ರ-ಎ** | 26 | ಸಾ.ಅ. | 51 | ಪ್ರವರ್ಗ -II (ಎ) | 76 | ಸಾ.ಅ. |
| 02 | ಸಾ.ಅ. | 27 | **ಪ.ಜಾ. ಪ್ರ-ಬಿ** | 52 | ಸಾ.ಅ. | 77 | ಪ್ರವರ್ಗ-II (ಎ) |
| 03 | ಪ.ಪಂ | 28 | ಸಾ.ಅ. | 53 | **ಪ.ಜಾ. ಪ್ರ-ಎ** | 78 | ಪ.ಪಂ. |
| 04 | ಸಾ.ಅ. | 29 | ಪ್ರವರ್ಗ-II (ಎ) | 54 | ಸಾ.ಅ. | 79 | ಪ್ರವರ್ಗ-I |
| 05 | ಪ್ರವರ್ಗ-I | 30 | ಸಾ.ಅ. | 55 | ಪ್ರವರ್ಗ-II (ಎ) | 80 | ಸಾ.ಅ. |
| 06 | ಸಾ.ಅ. | 31 | ಪ್ರವರ್ಗ-I | 56 | ಸಾ.ಅ. | 81 | **ಪ.ಜಾ. ಪ್ರ-ಬಿ** |
| 07 | ಪ್ರವರ್ಗ -II (ಎ) | 32 | ಪ.ಪಂ | 57 | ಪ್ರವರ್ಗ-I | 82 | ಸಾ.ಅ. |
| 08 | ಸಾ.ಅ. | 33 | **ಪ.ಜಾ. ಪ್ರ-ಸಿ** | 58 | ಸಾ.ಅ. | 83 | ಪ್ರವರ್ಗ-III (ಬಿ) |
| 09 | **ಪ.ಜಾ. ಪ್ರ-ಬಿ** | 34 | ಸಾ.ಅ. | 59 | **ಪ.ಜಾ. ಪ್ರ-ಬಿ** | 84 | ಸಾ.ಅ. |
| 10 | ಸಾ.ಅ. | 35 | ಪ್ರವರ್ಗ -II (ಬಿ) | 60 | ಸಾ.ಅ. | 85 | ಪ್ರವರ್ಗ -II (ಎ) |
| 11 | ಪ್ರವರ್ಗ- II (ಬಿ) | 36 | ಸಾ.ಅ. | 61 | ಪ್ರವರ್ಗ -II (ಬಿ) | 86 | ಸಾ.ಅ. |
| 12 | ಸಾ.ಅ. | 37 | ಪ್ರವರ್ಗ-II (ಎ) | 62 | ಪ.ಪಂ. | 87 | ಪ್ರವರ್ಗ -II (ಬಿ) |
| 13 | ಪ್ರವರ್ಗ- II (ಎ) | 38 | ಸಾ.ಅ. | 63 | ಪ್ರವರ್ಗ -II (ಎ) | 88 | ಸಾ.ಅ. |
| 14 | ಸಾ.ಅ. | 39 | ಪ.ಪಂ | 64 | ಸಾ.ಅ. | 89 | **ಪ.ಜಾ. ಪ್ರ-ಸಿ** |
| 15 | **ಪ.ಜಾ. ಪ್ರ-ಸಿ** | 40 | ಸಾ.ಅ. | 65 | ಪ್ರವರ್ಗ- III (ಬಿ) | 90 | ಸಾ.ಅ. |
| 16 | ಸಾ.ಅ. | 41 | **ಪ.ಜಾ. ಪ್ರ-ಎ** | 66 | ಸಾ.ಅ. | 91 | ಪ್ರವರ್ಗ -II (ಎ) |
| 17 | ಪ್ರವರ್ಗ-III (ಎ) | 42 | ಸಾ.ಅ. | 67 | **ಪ.ಜಾ. ಪ್ರ-ಸಿ** | 92 | ಸಾ.ಅ. |
| 18 | ಪ.ಪಂ | 43 | ಪ್ರವರ್ಗ-III (ಬಿ) | 68 | ಸಾ.ಅ. | 93 | **ಪ.ಜಾ. ಪ್ರ-ಎ** |
| 19 | ಪ್ರವರ್ಗ-III (ಬಿ) | 44 | ಸಾ.ಅ. | 69 | ಪ್ರವರ್ಗ -II (ಎ) | 94 | ಸಾ.ಅ. |
| 20 | ಸಾ.ಅ. | 45 | ಪ್ರವರ್ಗ-II (ಎ) | 70 | ಸಾ.ಅ. | 95 | ಪ್ರವರ್ಗ -III (ಎ) |
| 21 | ಪ್ರವರ್ಗ-II (ಎ) | 46 | **ಪ.ಜಾ. ಪ್ರ-ಬಿ** | 71 | ಪ.ಪಂ | 96 | **ಪ.ಜಾ. ಪ್ರ-ಬಿ** |
| 22 | ಸಾ.ಅ. | 47 | ಪ್ರವರ್ಗ-III (ಎ) | 72 | ಸಾ.ಅ. | 97 | ಪ್ರವರ್ಗ -II (ಎ) |
| 23 | **ಪ.ಜಾ. ಪ್ರ-ಎ** | 48 | ಸಾ.ಅ. | 73 | ಪ್ರವರ್ಗ -III (ಎ) | 98 | ಸಾ.ಅ. |
| 24 | ಸಾ.ಅ. | 49 | **ಪ.ಜಾ. ಪ್ರ-ಸಿ** | 74 | ಸಾ.ಅ. | 99 | ಪ್ರವರ್ಗ -III (ಬಿ) |
| 25 | ಪ್ರವರ್ಗ-II (ಎ) | 50 | ಸಾ.ಅ. | 75 | **ಪ.ಜಾ. ಪ್ರ-ಎ** | 100 | ಸಾ.ಅ. |

Scanned with OKEN Scanner

## ಮೀಸಲಾತಿ ಹಂಚಿಕೆಯ ಸ್ಪಷ್ಟೀಕರಣ

| ಪ್ರವರ್ಗಗಳು | ಶೇಕಡವಾರು ಮೀಸಲಾತಿ |
|---|---|
| ಪ್ರವರ್ಗ- I | 04 |
| ಪ್ರವರ್ಗ- II(ಎ) | 15 |
| ಪ್ರವರ್ಗ-II(ಬಿ) | 04 |
| ಪ್ರವರ್ಗ- III(ಎ) | 04 |
| ಪ್ರವರ್ಗ-III(ಬಿ) | 05 |
| ಪರಿಶಿಷ್ಟ ಜಾತಿ ಪ್ರವರ್ಗ-ಎ (ಪ.ಜಾ. ಪ್ರ-ಎ) | 06 |
| ಪರಿಶಿಷ್ಟ ಜಾತಿ ಪ್ರವರ್ಗ-ಬಿ (ಪ.ಜಾ. ಪ್ರ-ಬಿ) | 06 |
| ಪರಿಶಿಷ್ಟ ಜಾತಿ ಪ್ರವರ್ಗ-ಸಿ (ಪ.ಜಾ. ಪ್ರ-ಸಿ) | 05 |
| ಪರಿಶಿಷ್ಟ ಪಂಗಡ (ಪ.ಪಂ.) | 07 |
| ಸಾಮಾನ್ಯ ಅರ್ಹತೆ (ಸಾ.ಅ.) | 44 |
| ಒಟ್ಟು | 100 |

Scanned with OKEN Scanner